# ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ: 21-11-2022

## ಹುಮನಾಬಾದ ಸಂಚಾರ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 116/2022 ಕಲಂ 279, 304(ಎ) ಐಪಿಸಿ :-

ರಾಮಚಂದ್ರ ತಂದೆ ನರಸಪ್ಪ ಚಿರನೋರ ವಯ: 62ವರ್ಷ, ಜಾತಿ: ಕೊಳಿ, ಉ: ಕೂಲಿ ಕೆಲಸ ಸಾ: ಕೊಡಂಬಲ್ ರವರು ಠಾಣೆಗೆ ಹಾಜರಾಗಿ ದೂರು ನೀಡಿದರ ಸಾರಾಂಶವೆನೆಂದರೆ ದಿ : 19/11/2022 ರಂದು ಮನೋಹರ ಹಾಗು ಫಿರ್ಯಾದಿಯ ಮಗ ಉಮೇಶ ಲಾರಿಯಲ್ಲಿರುವ ಹೊಟ್ಟು ಹುಮನಾಬಾದನ ಖಾಜಾ ಕಂಪನಿಯಲ್ಲಿ ಖಾಲಿ ಮಾಡಿ ಮರಳಿ ಲಾರಿಯಲ್ಲಿ ನೆಹರು ನಗರ ಒತ್ತಿಗೆ ಹೋಗುವಾಗ ಹುಮನಾಬಾದನ ಅಭೀಷೇಕ ಬಾರ್ ಹತ್ತಿರ ಲಾರಿ ನಿಲ್ಲಿಸಿ ನೂರ ಧಾಬಾದಲ್ಲಿ ಚಹಾ ಕುಡಿದು ಇಬ್ಬರು ಬಂದು ದಿನಾಂಕ: 19-11-2022 ರಂದು ರಾತ್ರಿ 10-00 ಗಂಟೆಗೆ ರಾಷ್ಟ್ರೀಯ ಹೆದ್ದಾರಿ 65 ಹುಮನಾಬಾದನ ಆಭೀಷೇಕ ಬಾರ ಎದರುಗಿ ರೊಡಿನ ಪಕ್ಕದಲ್ಲಿ ನಿಂತುಕೊಂಡಾಗ ಸೋಲಾಪೂರ ಕಡೆಯಿಂದ ಒಂದು ಕಾರ ಚಾಲಕ ತನ್ನ ಕಾರನ್ನು ಅತೀವೇಗ ಹಾಗೂ ನಿಷ್ಕಾಳಜಿತನದಿಂದ ಚಲಾಯಿಸಿಕೊಂಡು ಬಂದು ಉಮೇಶನಿಗೆ ಡಿಕ್ಕಿ ಮಾಡಿರುತ್ತಾನೆ ಡಿಕ್ಕಿ ಮಾಡಿದ ರಭಸಕ್ಕೆ ಅವನು ಹಾರಿ ಬಿದ್ದಿರುತ್ತಾನೆ. ಅವನ ಮುಖಕ್ಕೆ ಭಾರಿ ರಕ್ತಗಾಯವಾಗಿ ಎರಡು ಕಿವಿಗಳಿಂದ ರಕ್ತ ಸ್ರಾವವಾಗುತ್ತಿತ್ತು, ಕಾರ ನಂಬರ ನೋಡಲಾಗಿ ಅದರ ನಂ KA56M0794 ಇತ್ತು, ನಂತರ ಅಂಬುಲೆನ್ಸನಲ್ಲಿ ಹುಮನಾಬಾದ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿದ್ದು ಹೆಚ್ಚಿನ ಚಿಕಿತ್ಸೆ ಕುರಿತು ಬೀದರ ಆಸ್ಪತ್ರೆಗೆ ಕಳುಹಿಸಿಕೊಟ್ಟಿದ್ದು ಬೀದರ ಸರಕಾರಿ ಆಸ್ಪತ್ರೆಯಲ್ಲಿ ಚಕಿತ್ಸೆ ಪಡೆಯುತ್ತಿದ್ದಾಗ ಫಿರ್ಯಾದಿ ಮಗ ಉಮೇಶ ವಯ: 32ವರ್ಷ, ಇತನು ಚಿಕಿತ್ಸೆ ಫಲಕಾರಿಯಾಗದೆ ದಿನಾಂಕ: 20/11/2022 ರಂದು ಬೆಳಿಗ್ಗೆ 09-00 ಗಂಟೆಗೆ ಮರಣ ಹೊಂದಿರುತ್ತಾನೆ ಅಂತ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.

## ಚಿಟಗುಪ್ಪಾ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 136/2022 ಕಲಂ 279, 304(ಎ) ಐಪಿಸಿ ಜೊತೆ 187 ಐಎಮ್.ವಿ ಕಾಯ್ದೆ :-

ದಿನಾಂಕ 20/11/2022 ರಂದು 2130 ಗಂಟೆಗೆ ಇಂದುಮತಿ ತಂದೆ ಶರಣಪ್ಪಾ ಗಾರಂಪಳ್ಳಿ , ವಯ:39 ವರ್ಷ ಜಾತಿ:ಲಿಂಗಾಯತ, ಉ:ಸಮಾಜ ಸೇವಕ, ಸಾ/ ಉಡಬಾಳ, ತಾ/ಚಿಟಗುಪ್ಪಾ, ರವರು ಠಾಣೆಗೆ ಹಾಜರಾಗಿ ನೀಡಿದ ಹೇಳಿಕೆ ಪಡೆದುಕೊಂಡಿದರ ಸಾರಾಂಶವೇನೆಂದರ ಫಿರ್ಯಾದಿ ತಂದೆ ಶರಣಪ್ಪಾ ವಯ 75 ವರ್ಷ ರವರು ನಮ್ಮ ಹೋಲದಲ್ಲಿ ಒಕ್ಕಲುತನ ಕೇಲಸ ಮಾಡಿಕೊಂಡಿರುತ್ತಾರೆ . ಹೀಗಿರುವಾಗ ದಿನಾಂಕ 20/11/2022 ರಂದು ರಾತ್ರಿ 07:10 ಪಿ.ಎಮ್ ಗಂಟೆಯ ಚಿಟಗುಪ್ಪಾ ಕಡೆಯಿಂದ ಒಂದ ಒಂದು ಅಪ್ಪಿ ಆ ಟೋ ನಂ :ಕೆಎ-39-7173 ನೇದ್ದರ ಚಾಲಕನು ತನ್ನ ಆಟೋವನ್ನು ಅತೀವೇಗ ಹಾಗೂ ನಿಷ್ಕಾಳಜೀತನದಿಂದ ಚಲಾಯಿಸಿಕೊಂಡು ಬಂದು ಡಿಕ್ಕಿಮಾಡಿ ಅಪಘಾತ ಪಡಿಸಿ ಆಟೋ ಚಾಲಕನ್ನು ಆಟೋವನ್ನು ಸ್ವಲ್ಪ ಮುಂದೆ ಹೋಗಿ ಆಟೋ ನಿಲ್ಲಿಸಿ ಓಡಿ ಹೋಗಿರುತ್ತಾನೆ. ಆಟೋ ನಂ :ಕೆಎ-39-7173 ನೇದ್ದರ ಚಾಲಕನು ತನ್ನ ಆಟೋವನ್ನು ಅತೀವೇಗ ಹಾಗೂ ನಿಷ್ಕಾಳಜೀತನದಿಂದ ಚಲಾಯಿಸಿಕೊಂಡು ಬಂದು ಫಿರ್ಯಾದಿಯ ತಂದೆಗೆ ಡಿಕ್ಕಿಮಾಡಿದ್ದಾಗ ಎದುರಗಡೆ ತಲೆಗೆ ಭಾರಿ ರಕ್ತಗಾಯವಾಗಿ ಸ್ಥಳದಲ್ಲಿಯೇ ಮೃತಪಟ್ಟಿರುತ್ತಾರೆ . ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.